5. ವಿಷಯ : ಕೆ.ಜಿ.ಎಫ್.ನ ಚಿನ್ನದ ಗಣಿಯನ್ನು ಪುನರ್ ಆರಂಭಿಸುವ ಬಗ್ಗೆ.

ಶ್ರೀ ವೈ. ಸಂಪಂಗಿ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್.ನ ಚಿನ್ನದ ಗಣಿಯನ್ನು ಪುನರ್ ಆರಂಭಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರನ್ನು ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಪಿ.ಎಂ. ಉದಾಸಿ ಲೋಕೋಪಯೋಗಿ ಸಚಿವರು (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯವು Industrial Dispute Act,1947 section 25 ರನ್ವಯ ಭಾರತ ಗೋಲ್ಡ್ ಮೈನ್ಸ್ ಕಂಪನಿ (ಕೆ.ಜಿ.ಎಫ್. ಕಂಪನಿ) ಯನ್ನು ದಿನಾಂಕ 1/3/2001ರಿಂದ ಜಾರಿಗೆ ಬರುವಂತೆ ಮುಚ್ಚಲಾಗಿದೆ.

ಈ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರಲ್ಲಿ ಬಹಳಷ್ಟು ಜನರು ವಯೋಮಿತಿ ಮೀರಿರುತ್ತಾರೆ ಹಾಗೂ ಕೆಲವರು ಮೃತರಾಗಿರುತ್ತಾರೆ. ಇತ್ತೀಚೆಗೆ ರಾಜ್ಯ ಸರ್ಕಾರವು KGFಗೆ ಸುಮಾರು 30–35 ಕಿ.ಮೀ. ಗಳ ಅಂತರದಲ್ಲಿ ನರಸಾಪುರ ಕೈಗಾರಿಕಾ ಪ್ರದೇಶ, ಮಾಲೂರು ಕೈಗಾರಿಕಾ ಪ್ರದೇಶ ಮತ್ತು ವೇಮಗಲ್ ಕೈಗಾರಿಕಾ ಪ್ರದೇಶಗಳನ್ನು ಅಂದರೆ ಸುಮಾರು 3000 ಎಕರೆ ಪ್ರದೇಶವನ್ನು ಕೈಗಾರಿಕಾ ಸ್ಥಾಪನೆಗಾಗಿ ಅಭಿವೃದ್ಧಿ ಪಡಿಸುತ್ತಿದ್ದು, ಇವುಗಳಲ್ಲಿ ಪ್ರತಿಷ್ಠಿತ ಕೈಗಾರಿಕೆಗಳು ವಿಶೇಷವಾಗಿ ಆಟೋಮೊಬೈಲ್ ಕೈಗಾರಿಕೆಗಳು ಸ್ಥಾಪಿತಗೊಳ್ಳುತ್ತಿದ್ದು, KGF ಒಳಗೊಂಡಂತೆ ಜಿಲ್ಲೆಯ ಸಾವಿರಾರು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗವಕಾಶಗಳು ಲಭ್ಯವಾಗುತ್ತಿವೆ.

ಈ ಕಂಪನಿಯ ಕಾರ್ಮಿಕ ಸಹಕಾರ ಸಂಘಗಳು ವಿವಿಧ ನ್ಯಾಯಾಲಯಗಳಲ್ಲಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯಗಳು ನೀಡಿದ ಆದೇಶಗಳ ವಿರುದ್ಧ ರಾಜ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ (ಸಿ) ಸಂಖ್ಯೆ: 20529–32/2012ಅನ್ನು ದಾಖಲಿಸಿದ್ದು, ಅದು ವಿಚಾರಣೆ ಹಂತದಲ್ಲಿರುತ್ತವೆ. ನ್ಯಾಯಾಲಯದ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ.

ನ್ಯಾಯಾಲಯದ ತೀರ್ಪು ಬಂದ ನಂತರ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಲಾಗುವುದು.

ಶ್ರೀ ವೈ. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರತಕ್ಕಂಥ ಉತ್ತರ, ಮಾನ್ಯ ಮಂತ್ರಿಗಳು ಕೇವಲ ಕಣ್ಣೊರೆಸುವಂತಹ ಉತ್ತರ ಕೊಟ್ಟಿದ್ದಾರೆ. ಇದು ಇಡೀ ದೇಶಕ್ಕೆ ಗೊತ್ತಿರತಕ್ಕಂಥದ್ದು, ಭಾರತ್ ಗೋಲ್ಡ್ ಕಂಪನಿಯ ಬಗ್ಗೆ ಇವತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಇದೆ. ಈ ದಾವೆಯ ಮೂಲ ಉದ್ದೇಶ, 2006ರಲ್ಲಿ ಕೇಂದ್ರ ಸರ್ಕಾರ, ಸಹಕಾರಿ ಸಂಘಗಳು ಮತ್ತು ವಿದೇಶಿ ಕಂಪನಿಗಳನ್ನೊಳಗೊಂಡಂತಹ ಸಹಭಾಗಿತ್ವದಲ್ಲಿ ಜಾಗತಿಕ ಟೆಂಡರ್‌ನಲ್ಲಿ ಭಾಗವಹಿಸಿ, ಕಂಪನಿಯನ್ನು ನೀವು ಪುನರಾರಂಭ ಮಾಡಬಹುದು ಎಂದು ಕೇಂದ್ರ ಸರ್ಕಾರ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿತು. ಅದಾದನಂತರ ನಮ್ಮ ಕಾರ್ಮಿಕರು ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಆಧರಿಸಿ, service gratuity 55 ಕೋಟಿ ರೂಪಾಯಿ ಹಣ ಬರಬೇಕಾಗಿತ್ತು ಮತ್ತು ಅಲ್ಲಿ ವಾಸ ಮಾಡತಕ್ಕಂಥ ಸುಮಾರು 20 ಸಾವಿರ ಕುಟುಂಬಗಳನ್ನು ಖಾಯಂಗೊಳಿಸಬೇಕು. ಅಲ್ಲಿ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ನೀವು ಆ ಸ್ಥಳವನ್ನು ವರ್ಗಾಯಿಸಬೇಕೆಂದು ಅವರು ದಾವೆಯನ್ನು ಹೂಡಿದ್ದಾರೆ. ಈ ದಾವೆಯನ್ನು ಹೂಡಿದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ 2006ರಲ್ಲಿ ಏನು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿತ್ತು, ಆ ತೀರ್ಮಾನದ ಆದೇಶದಂತೆ, ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅವರು ಒಂದು ರಿಟ್‌ಅನ್ನು ಸಲ್ಲಿಸಿ, ಈ ಎಲ್ಲಾ ಸೌಲಭ್ಯಗಳನ್ನು ನಾವು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ, ಅವರು ಅದನ್ನು ವಾಪಸ್ಸು ಪಡೆದುಕೊಂಡರೆ ಅದು ಇತ್ಯರ್ಥವಾಗುತ್ತದೆ. ಅದು ಒಂದು ಭಾಗ. ಆ ವಿಚಾರದಲ್ಲಿ ಇಲ್ಲಿಯವರೆಗೂ ಕೂಡ ನಮ್ಮ ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕೆ.ಜಿ.ಎಫ್‌ನ ಚಿನ್ನದ ಗಣಿ, ನಮ್ಮ ರಾಜ್ಯಕ್ಕೆ ಸೇರಿದೆ ಎನ್ನುವ ಅರಿವೇ ಇಲ್ಲದಂತಹ ಪರಿಸ್ಥಿತಿ ಆಗಿದೆ. ಇದೊಂದು ದೌರ್ಭಾಗ್ಯ. ಏಕೆಂದರೆ, ಇಡೀ ದೇಶಕ್ಕೇ ಚಿನ್ನ ಕೊಟ್ಟಂತಹ ನಮ್ಮ ನಾಡು, ಬಹುತೇಕ ಸಂರ್ಭದಲ್ಲಿ ಸಾಹಿತಿಗಳು, ಕವಿಗಳು, ಬುದ್ಧಿವಂತರು ಕೆ.ಜಿ.ಎಫ್

ಅನ್ನು ಬಹಳ ವರ್ಣನೆ ಮಾಡಿ ಮಾತನಾಡತಕ್ಕಂಥ ಸನ್ನಿವೇಶವನ್ನು ನಾವೆಲ್ಲರೂ ಕೂಡ ಕಣ್ಮುಂದೆ ನೋಡುತ್ತಿದ್ದೇವೆ. ಆದರೆ ಮಂತ್ರಿಗಳು ಅನೇಕ ಸ್ಥಳಗಳಲ್ಲಿ ರೈತರ ಜಮೀನನ್ನು acquisition ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ರೈತರು ಫಲವತ್ತಾದ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಕ್ಕೆ ಗಲಾಟೆ ಮಾಡುತ್ತಾರೆ. ನೀವು ಅಂತಹ ಜಾಗದಲ್ಲಿ ಏಕೆ acquisition ಮಾಡುತ್ತೀರಿ? ನಮ್ಮ ಕ್ಷೇತ್ರದಲ್ಲಿರತಕ್ಕಂಥ ಮೈನಿಂಗ್ ಪ್ರದೇಶ 12,855 ಎಕರೆ ಇದೆ. ಈ 12,855 ಎಕರೆ ಭೂಮಿಯಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು 5 ಸಾವಿರ ಎಕರೆ ನಮಗೆ ಕೊಟ್ಟರೆ, ಇಲ್ಲಿರತಕ್ಕಂಥ ನಿರುದ್ಯೋಗಿಗಳಿಗೆ ನಾವು ಅಲ್ಲಿ ಬೃಹತ್ತಾದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬಹುದಾಗಿತ್ತು. ಆದರೆ ಇಲ್ಲಿಯತನಕ ಕೇಂದ್ರ ಸರ್ಕಾರದವರ ಹತ್ತಿರ ನಮ್ಮ ರಾಜ್ಯ ಸರ್ಕಾರದವರು ಯಾರೂ ಕೂಡ ವಿನಂತಿ ಮಾಡಲಿಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿದ್ದುದು ಯಾವುದು ಎಂದರೆ, ಕಾರ್ಮಿಕರಿಗೂ ಹಾಗೂ ಕಾರ್ಮಿಕರಿಗೆ ಬರಬೇಕಾಗಿರತಕ್ಕಂಥ service gratuity ಕೇಳಿಲಿಕ್ಕೆ, ಕಾರ್ಮಿಕರು ವಾಸ ಮಾಡತಕ್ಕಂಥ ಮನೆಗಳನ್ನು ಖಾಯಂಗೊಳಿಸಲಿಕ್ಕೆ, ಕಾರ್ಮಿಕರಿಗೆ ಅಲ್ಲಿ ಬರತಕ್ಕಂಥ ಏನೇ ಸೌಲಭ್ಯಗಳು ಇದ್ದರೂ ಕೂಡ ಅವೆಲ್ಲವನ್ನೂ ನಮಗೆ ಕೊಡಬೇಕೆಂದು ಕೇಂದ್ರ ಸರ್ಕಾರದ ವಿರುದ್ಧವಾಗಿ ಅವರು ಹೋಗಿದ್ದಾರೆಯೇ ಹೊರತು, ಕಂಪನಿಯನ್ನು ಅವರು ಪುನರಾರಂಭ ಮಾಡಬಾರದು ಎನ್ನುವುದು ಅವರ ವಿನಂತಿ ಅಲ್ಲ. ಈಗಾಗಲೇ ಕಂಪನಿಯನ್ನು ಪುನರಾರಂಭ ಮಾಡಬೇಕೆಂದು ಕಳೆದ ನವೆಂಬರ್ ತಿಂಗಳಿನಲ್ಲಿ 27 ನೇ ತಾರೀಖು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಸಚಿವರಾದ ನಾರಾಯಣಸ್ವಾಮಿಯವರು ಮತ್ತು ಅದಕ್ಕೆ ಸಂಬಂಧಪಟ್ಟಂತಹ ಸಚಿವರಾದ ದಿನ್‌ಷಾಜಿ.ಪಟೇಲ್‌ರವರು ಮತ್ತು ಸನ್ಮಾನ್ಯ ಕೆ.ಹೆಚ್.ಮುನಿಯಪ್ಪನವರು ಈಗಾಗಲೇ ಪ್ರತಿಕಾಗೋಷ್ಠಿಯನ್ನು ಮಾಡಿ ಕೂಡಲೇ ಕಂಪನಿಯನ್ನು ಪ್ರಾರಂಭ ಮಾಡುತ್ತೇವೆ, ಸರ್ವೋಚ್ಚ ನ್ಯಾಯಾಲಯದಲ್ಲಿರುವಂತಹ

ದಾವೆಯನ್ನು ನಾವು withdraw ಮಾಡಿ, ಅಲ್ಲಿರತಕ್ಕಂಥ ಕಾರ್ಮಿಕರಿಗೆ ನಾವು ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ತಿಳಿಸಿದ್ದಾರೆ. ಏತಕ್ಕಾಗಿ ರಾಜ್ಯ ಸರ್ಕಾರದವರು ಅದರಲ್ಲಿ ಮಧ್ಯವಹಿಸುತ್ತಿಲ್ಲ? ನಮ್ಮ ರಾಜ್ಯದಲ್ಲಿರತಕ್ಕಂತಹ ನಿರುದ್ಯೋಗಿಗಳಿಗೆ ಏತಕ್ಕಾಗಿ ಅವರಿಗೆ ಕೆಲಸ ಕೊಡತಕ್ಕಂತಹ ಕಾರ್ಯಕ್ರಮಕ್ಕೆ ಅವರು ಕೈಹಾಕಿಲ್ಲ ಎನ್ನುವಂತಹ ಪ್ರಶ್ನೆಯನ್ನು ನಮ್ಮ ರಾಜ್ಯ ಸರ್ಕಾರದ ಮುಂದಿಟ್ಟಿದ್ದೇನೆ. ಇದು ಬಹಳ ಜ್ವಲಂತ ಸಮಸ್ಯೆಯಾಗಿದೆ. ಇನ್ನು 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆಯಾಗಿದೆ. ಗಮನ ಸೆಳೆಯುವ ಸೂಚನೆಯಲ್ಲಿ ಅದಕ್ಕೆ ಅವಕಾಶವಿಲ್ಲ.

ಶ್ರೀ ವೈ. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ 5 ನಿಮಿಷಗಳ ಕಾಲ ಅವಕಾಶವನ್ನು ಕೊಡಿ, ನಾನು ನನ್ನ ಅನಿಸಿಕೆಗಳನ್ನು ರಾಜ್ಯ ಸರ್ಕಾರದ ಮುಂದೆ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ನಾನು ಗಮನ ಸೆಳೆಯುವುದು ಎಂದು ಹೇಳಿದ್ದೇನೆ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರ ಕಳಕಳಿ ಏನಿದೆ ಎಂದರೆ, ಸುಪ್ರೀಂ ಕೋರ್ಟಿನಲ್ಲಿರುವಂತಹ ನ್ಯಾಯಾಲಯದ ತೀರ್ಪಿನ ಬಗ್ಗೆ ರಾಜ್ಯ ಸರ್ಕಾರದವರು ಅಂತಿಮವಾಗಿ ತೀರ್ಪನ್ನು ಕೈಗೊಳ್ಳಬೇಕಗಿರುವ ಕ್ರಮವನ್ನು ಕೈಗೊಂಡರೆ ಇದಕ್ಕೊಂದು ಪರಿಹಾರ ಸಿಗುತ್ತದೆ ಎಂದು ಇದೆ. ಸರ್ಕಾರವು ಈ ಬಗ್ಗೆ ನಿರ್ಲಕ್ಷ್ಯ ಮಾಡುತ್ತದೆ ಅಥವಾ ವಿಳಂಬ ಮಾಡುತ್ತದೆ ಎನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಇಲಾಖಾಧಿಕಾರಿಗಳ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ಪರಿಹಾರ ಕಂಡುಹಿಡಿಯಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತಂದು ಅದರ ಬಗ್ಗೆ ನಿರ್ವಹಣೆ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ವೈ.ಸಂಪಂಗಿ : ಇದು ರಾಜ್ಯದಕ್ಕೆ ಸಂಬಂಧಪಟ್ಟಿರುತ್ತದೆ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆಯಾಗಿದೆ.

ಶ್ರೀ ವೈ. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನನಗೆ ದಯವಿಟ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ಮಾತನಾಡುವುದಕ್ಕೆ ಹೇಗೆ ಅವಕಾಶವನ್ನು ಕೊಡುವುದು.?

ಶ್ರೀ ವೈ. ಸಂಪಂಗಿ : ಕಳೆದ ತಿಂಗಳು ಯುರೇನಿಯಂ ತ್ಯಾಜ್ಯವನ್ನು ಕೂಡಂಕುಳಂನಲ್ಲಿ ಪ್ರಾರಂಭಮಾಡಿರುವುದು. ನಾನು ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿರ ತಕ್ಕಂತಹ ಕೆಜಿಎಫ್‌ನಲ್ಲಿರತಕ್ಕಂತಹ ಸುರಂಗಮಾರ್ಗಗಳಲ್ಲಿ ಯುರೇನಿಯಂ ತ್ಯಾಜ್ಯವನ್ನು ಶೇಖರಣೆ ಮಾಡಬೇಕೆಂದು ಹೇಳಿ ಕಳೆದ ತಿಂಗಳು ಕೇಂದ್ರ ಸರ್ಕಾರವು ಒಂದು ತೀರ್ಮಾನವನ್ನು ಮಾಡಿತು. ಆ ತೀರ್ಮಾನ ಮಾಡಿದ ಹಿನ್ನೆಲೆಯಲ್ಲಿ ನಮ್ಮ ಕ್ಷೇತ್ರದ ಸಾರ್ವಜನಿಕರು ಮತ್ತು ನಾನು ನಮ್ಮ ಪಕ್ಷದ ಎಲ್ಲಾ ಮುಖಂಡರುಗಳು ಸೇರಿ ಅದರ ವಿರುದ್ಧ ಪ್ರತಿಭಟನೆ ಮಾಡಿದಂತಹ ಸಂದರ್ಭದಲ್ಲಿ ಕಳೆದ ನವೆಂಬರ್ 23ನೇ ತಾರೀಖು ಏನು ಆ ತೀರ್ಪನ್ನು ಮಾಡಿದರು, ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡವಿಟ್‌ನ್ನು ಸಲ್ಲಿಸಿದರು ಅದರ ವಿರುದ್ಧ ಪ್ರತಿಭಟನೆಯನ್ನು ಮಾಡಿ ನಾವು ಕಳೆದ ತಿಂಗಳು ನವೆಂಬರ್ 27ನೇ ತಾರೀಖು ಸತತವಾಗಿ ಧರಣಿಯನ್ನು ಮಾಡಿದೆವು. ಆ ಹಿನ್ನೆಲೆಯಲ್ಲಿ ಅವರು ವಾಪಸ್ಸು ತೆಗೆದುಕೊಳ್ಳುತ್ತೇನೆಂಬ ಬಗ್ಗೆ ಒಂದು ಹೇಳಿಕೆಯನ್ನು ಪ್ರತಿಕೆಗಳ ಮೂಲಕ ಕೊಟ್ಟರು. ಆದರೆ ಇವತ್ತು ಮತ್ತೆ ಪುನಃ 4ನೇ ತಾರಿಖು ಅವರು ಸುಪ್ರೀಂ ಕೋರ್ಟಿಗೆ ಏನೆಂದರೆ ಹೋಗಿದ್ದಾರೆಂದರೆ ಮತ್ತೆ ಅಲ್ಲಿ ಅವರು ನಾವು 2 ರಿಂದ 7 ವರ್ಷಗಳ ಕಾಲ ಯುರೇನಿಯಂ ತ್ಯಾಜ್ಯವನ್ನು ಕೂಡಂಕುಳಂನಲ್ಲಿ ಶೇಖರಣೆಯನ್ನು ಮಾಡುತ್ತೇವೆ. ಅದು ಆದ ನಂತರ ಮತ್ತೆ ಕರ್ನಾಟಕದಲ್ಲಿ ನಾವು ಈ ತ್ಯಾಜ್ಯವನ್ನು ಹಾಕುವುದಕ್ಕೆ ಈಗಾಗಲೇ ಜಾಗವನ್ನು ಹುಡುಕುತಿದ್ದೇವೆನ್ನುವಂತಹ ಮಾತನ್ನು Supreme Courtನಲ್ಲಿ Solicitor General Parasharanರವರು ನ್ಯಾಯಾಧೀಶರ ಮುಂದೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ಕೇವಲ ಕೆಜಿಎಫ್‌ಗೆ ಅಲ್ಲ, ಇಡೀ ರಾಜ್ಯಕ್ಕೆ ಮಾರಕವಾದಂತಹ ಒಂದು

ವಿಷಯವಾಗಿದೆ. ಈಗಾಗಲೇ ಕಾವೇರಿ ನೀರಿನ ಬಗ್ಗೆ ಕಳೆದ ಎರಡು-ಮೂರು ದಿನಗಳಿಂದ ಇಲ್ಲಿ ಚರ್ಚೆಯಾಗಿದೆ. ಅವತ್ತು ಬ್ರಿಟಿಷರ ಕಾಲದಲ್ಲಿ ಅವರು ಮಾಡಿದಂತಹ ತೀರ್ಮಾನವನ್ನು ನಾವು ನಮ್ಮ ಸರ್ಕಾರಗಳು ಬಂದಂತಹ ಸಂದರ್ಭದಲ್ಲಿ ಎಚ್ಚರಿಕೆಯನ್ನು ವಹಿಸಿದ್ದರೆ ಇವತ್ತಿನ ದಿವಸ ಕಾವೇರಿ ಗಲಾಟೆಯು ಇಷ್ಟು ಆಗುತ್ತಿರಲಿಲ್ಲ. ಆದರೆ ಇದಕ್ಕಿಂತ ದೊಡ್ಡವಾಗಿ ಮಾರಕವಾದಂತಹದ್ದು ಅಣುತ್ಯಾಜ್ಯವಾಗಿದೆ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರವಾಗಲಿ ಅಥವಾ ನಮ್ಮ ರಾಜ್ಯದ ಜನರಾಗಲಿ ನಾವು ಏನಾದರೂ ಅದರ ಬಗ್ಗೆ ಕಾಳಜಿಯನ್ನು ವಹಿಸದೆ ಹೋದರೆ ಮುಂದೆ ಆಗುವಂತಹ ದುರಂತಕ್ಕೆ ನಮ್ಮ ಸರ್ಕಾರದ ಆದಿಯಾಗಿ ಮುಂದೆ ಬರುವಂತಹ ಯಾವುದೇ ಸರ್ಕಾರಗಳು ಅದಕ್ಕೆ ಹೊಣೆಯಾಗುತ್ತದೆನ್ನುವಂತಹ ಮಾತನ್ನು ಈ ಸಭೆಯಲ್ಲಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ದಯವಿಟ್ಟು ಈಗಲೇ ನಮ್ಮ ರಾಜ್ಯ ಸರ್ಕಾರವು ನಮ್ಮ ರಾಜ್ಯದಲ್ಲಿ ಯಾವುದೇ ಮೂಲೆಯಲ್ಲಾದರೂ ಕೂಡ ಅಣುತ್ಯಾಜ್ಯವನ್ನು ಹಾಕುವುದಕ್ಕೆ ಬಿಡುವುದಿಲ್ಲವೆನ್ನುವಂತಹ ಮಾತನ್ನು ರಾಜ್ಯ ಸರ್ಕಾರವು ವಹಿಸಿಕೊಳ್ಳಬೇಕಗುತ್ತದೆ. ನಮ್ಮ ಕ್ಷೇತ್ರದಲ್ಲಿರುವಂತಹ ಸಮಸ್ಯೆ ಗಳನ್ನು ಬಗೆಹರಿಸುವುದಕ್ಕೆ ಮತ್ತು ನಾಗರಿಕ ಮೂಲಭೂತ ಸೌಲಭ್ಯಗಳನ್ನು ಬಗೆಹರಿಸುವ ಬಗ್ಗೆ ರಾಜ್ಯ ಸರ್ಕಾರವು ಗಮನಹರಿಸಬೇಕು. ಅಣುತ್ಯಾಜ್ಯದ ಬಗ್ಗೆ ವೈಜ್ಞಾನಿಕವಾಗಿ ಇವತ್ತು ವಿಜ್ಞಾನಿಗಳು ತಿಳಿಸತಕ್ಕಂತಹ ಒಂದು ವಿಷಯವೇನೆಂದರೆ, ಅದು ಯುರೇನಿಯಂ ತ್ಯಾಜ್ಯದ ಹೊರಬರುವಂತಹ ವಿಕಿರಣ ಇದೆಯಲ್ಲಾ, ಅದು ನಿಷ್ಕ್ರೀಯ ಆಗುವುದಕ್ಕೆ ಸುಮಾರು ಮೂರು ಲಕ್ಷ ವರ್ಷಗಳು ಬೇಕಾಗುತ್ತದೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಇದು ಎಂತಹ ದುರಂತ! ಅದನ್ನು ಸ್ಟೀಲ್ ಗೋಡೆಯನ್ನು ಮಾಡಿ ಅದನ್ನು ಸುರಂಗ ಮಾರ್ಗಗಳಲ್ಲಿ ಶೇಖರಣೆಯನ್ನು ಮಾಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ನಾವು ಒಂದು ಮಾತನ್ನು ಯೋಚನೆ ಮಾಡುವಂತಹ ಸಂದರ್ಭ ಬಂದಿದೆ. ಸ್ಟೀಲ್ ಗೋಡೆ ಏನಾದರೂ ಕಟ್ಟಿ ಅವರು ಇಟ್ಟಿದ್ದಾರೆಂದು ಒಪ್ಪಿಕೊಳ್ಳೋಣ. ಅದನ್ನು ಸ್ಟೀಲ್ ಗೋಡೆಯಲ್ಲಿ ಎಷ್ಟು ವರ್ಷಗಳ ಕಾಲ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಒಂದು ವೇಳೆ

ಭೂಕಂಪ ಆಯಿತು, ಸ್ಟೀಲ್ ಗೋಡೆ ಇರುತ್ತದೆಯೇ? ಇಡೀ ಪ್ರಪಂಚವೇ ಪ್ರಳಯ ಆಗುತ್ತದೆಯಲ್ಲಾ, ಅಂತಹ ಸಂದರ್ಭದಲ್ಲಿ ಇವರು ಕಟ್ಟುವಂತಹ ಸ್ಟೀಲ್ ಗೋಡೆ ನಮಗೆ ಬೇಕೇ? ಅಲ್ಲಿ ವಿದ್ಯುತ್‌ಗೆ ಉಪಯೋಗ ಮಾಡತಕ್ಕಂತಹ ಖರ್ಚು ಎಷ್ಟು ಗೊತ್ತೇ, 14,000 ಕೋಟಿ ರೂಪಾಯಿಗಳು. ಈ ಹಣ ಯಾರದು? ಇದು ನಮ್ಮ ದೇಶದ ಜನರ ತೆರಿಗೆಯ ಹಣದಲ್ಲಿ ಇವತ್ತು ಅಲ್ಲಿ ಅದನ್ನು ಸ್ಥಾಪನೆ ಮಾಡುತ್ತಿದ್ದಾರೆ. ವಿದ್ಯುತ್ ಕೂಡಂಕುಳಂಗೆ, ತ್ಯಾಜ್ಯವು ಕರ್ನಾಟಕಕ್ಕೆ, ಇದು ಇಂತಹ ದುರಂತ? ವಿಪರ್ಯಾಸ. ನಮ್ಮ ಕರ್ನಾಟಕದಲ್ಲಿ ನೆಲ, ಜಲ ಎಲ್ಲದರ ಬಗ್ಗೆ ಸಂಪತ್ತನ್ನು ನಾವು ಉಳಿಸಿಕೊಳ್ಳ ಬೇಕೆಂದು ಈ ಬಗ್ಗೆ ಸಾಹಿತಿಗಳು, ಕವಿಗಳು, ಬುದ್ಧಿಜೀವಿಗಳು, ಪ್ರಗತಿಪರರು ಎಲ್ಲರೂ ಕೂಡ ನಮ್ಮ ರಾಜ್ಯ, ನಮ್ಮ ರಾಜ್ಯ ಎಂದು ಹೋರಾಟವನ್ನು ಮಾಡಿ ಕೇಳುತ್ತಿದ್ದಾರೆ. ಹೌದು, ನಮ್ಮ ರಾಜ್ಯಕ್ಕೆ ಎಲ್ಲಾ ಕಸವನ್ನು ತುಂಬಿ ಹಾಕುತ್ತಿದ್ದಾರೆ. ನಮ್ಮ ರಾಜ್ಯವನ್ನು ಕಸದ ನಾಡನ್ನಾಗಿ ಮಾಡುತ್ತಿದ್ದಾರೆ. ನಾವು ಕೈಕಟ್ಟಿಕುಳಿತುಕೊಂಡಿದ್ದೇವೆಲ್ಲಾ? ಇದಕ್ಕೆ ನಾವು ಅವಕಾಶವನ್ನು ಕೊಡಬಾರದು. ಕಸದ ಜೊತೆಗೆ ವಿಷ. ಇವತ್ತು ನಾವು ಅದು ಬಹಳ ಕೆಟ್ಟದ್ದು.

ಅಧ್ಯಕ್ಷರು : ನಾನು ಗಮನ ಸೆಳೆಯುವ ಬಗ್ಗೆ ತಮಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ವೈ.ಸಂಪಂಗಿ : ಮಾನ್ಯ ಅಧ್ಯಕ್ಷರೆ, ನನಗೆ ಇನ್ನು ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ನಿಮಗೆ ಕೈಮುಗಿಯುತ್ತೇನೆ. ಏಕೆಂದರೆ ಇದು ಕೆಜಿಎಫ್‌ನಲ್ಲಿ ಆಗತಕ್ಕಂತಹ ಅಣುತ್ಯಾಜ್ಯ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ.....

ಶ್ರೀ ಪಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಸಂಪಂಗಿಯವರೆ, ಒಂದು ನಿಮಿಷ ಕೇಳಿ. ನಂತರ ತಾವು ಮಾತನಾಡಿ. ರಾಜ್ಯ ಸರ್ಕಾರದವರು ಬಹಳ ಸ್ಪಷ್ಟವಾಗಿ ತೀರ್ಮಾನ ಮಾಡಿದ್ದಾರೆ. ತಮಿಳುನಾಡು ಕೂಡಂಕುಳಂ ಅಣುಸ್ಥಾವರದಲ್ಲಿ ಯುರೇನಿಯಂ ಅಣುತ್ಯಾಜ್ಯವನ್ನು ಕರ್ನಾಟಕದ ಚಿನ್ನದ ಗಣಿ ಪ್ರದೇಶವಾಗಿರುವ ಕೆಜಿಎಫ್‌ನ ಚಿನ್ನದ ಗಣಿ ಸುರಂಗಗಳಲ್ಲಿ ಹಾಕಬೇಕೆಂಬುದರ ಬಗ್ಗೆ ಯಾವುದೇ ಸರ್ಕಾರಿ ಆದೇಶವನ್ನು

ರಾಜ್ಯ ಸರ್ಕಾರವು ಹೊರಡಿಸಿರುವುದಿಲ್ಲ. ಆದ್ದರಿಂದ ಇದನ್ನು ಸ್ಥಗಿತ ಗೊಳಿಸುವ ಬಗ್ಗೆ ಸರ್ಕಾರ ಅಧಿಸೂಚನೆಯನ್ನು ಹೊರಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಇಂತಹ ಯಾವುದೇ ಪ್ರಸಂಗ ಬಂದರೂ ಸಹಿತ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲವೆನ್ನುವ ಬಗ್ಗೆ ಸ್ಪಷ್ಟ ಅಭಿಪ್ರಾಯ ಇರುವಾಗ ತಾವು ಯಾರೂ ಅನುಮಾನಪಡುವ ಅವಶ್ಯಕತೆ ಇಲ್ಲ ಮತ್ತು ಜನ ಭಯಭೀತರಾಗಬೇಕಾದ ಅವಶ್ಯಕತೆ ಇಲ್ಲ ಎನ್ನುವ ಬಗ್ಗೆ ತಮ್ಮ ಕ್ಷೇತ್ರದ ಜನರಿಗೆ ಹೇಳಬಹುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರವನ್ನು ಕೊಟ್ಟಿರುವುದು ಹೀಗಿದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲ್‌ರವರೆ ತಾವು ಮಾತನಾಡಿ.

6. ವಿಷಯ : ಇಳಕಲ್ ನಗರವು ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಜವಳಿ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿರುವುದರಿಂದ ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಬಗ್ಗೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಇಳಕಲ್ ನಗರವು ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಜವಳಿ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿರುವುದರಿಂದ ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು, (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ) ಗಮನ ಸೆಳೆಯುತ್ತೇನೆ.

ನಮ್ಮ ತಾಲ್ಲೂಕಿನ ಇಳಕಲ್ ನಗರವು ಬಹಳ ದೊಡ್ಡ ಪಟ್ಟಣ ವಾಗಿದೆ. 2001ರ ಜನಸಂಖ್ಯೆಯ ಆಧಾರದ ಮೇಲೆ 51,000 ಜನಸಂಖ್ಯೆ ಇದ್ದಂತಹ ಒಂದು ಪಟ್ಟಣ ಇವತ್ತು 2011ರ ಜನಸಂಖ್ಯೆಯ ಆಧಾರದ ಮೇಲೆ ಸುಮಾರು 80,000 ಜನಸಂಖ್ಯೆವುಳ್ಳ ನಗರವಾಗಿದೆ. ಈ ನಗರದಲ್ಲಿ ಈಗಾಗಲೇ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಬೇಕಾದಂತಹ.....